ಓಃಎಸ್ಃನಂ.517/2025

ಪಿ.ಡಬ್ಲ್ಯೂ- 1

<u>ದಿನಾಂಕಃ **12-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**</u>

<u>**ಪಾಟೀ ಸವಾಲುಃ** ಪ್ರತಿವಾದಿ ಪರ ಶ್ರೀ ಎಜಿಪಿ ರವ **ರಿಂದ**</u>

ನಾನು 1 ನೇ ತರಗತಿಯಿಂದ 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ತಾಯಿ ನಾನು 9 ತಿಂಗಳುಮಗು ಇರುವಾಗ ಮೃತ ಪಟ್ಟಿರುವ ಕಾರಣ ನಾನು ನನ್ನ ತಾಯಿಯ ತಂದೆ ತಾಯಿಯಾದ ನನ್ನ ಅಜ್ಜಿ ತಾತನ ಬಳಿ ಬೆಳೆದಿರುತ್ತೇನೆ. ನನ್ನ ಅಜ್ಜಿ ತಾತ ನನ್ನನ್ನು ಶಾಲೆಗೆ ಸೇರಿಸಿರುತ್ತಾರೆಂದರೆ ಸರಿ. ಶಾಲೆಯಲ್ಲಿ ಸೇರಿಸುವ ಸಮಯದಲ್ಲಿ ನನ್ನ ಅಜ್ಜ ನನ್ನ ತಂದೆಯ ಹೆಸರು ವಿಜಯ್ ಕುಮಾರ್ ಎಂದು ತಪ್ಪಾಗಿ ನಮೂದು ಮಾಡಿರುತ್ತಾರೆ. ನನ್ನ ತಂದೆಹೆಸರು ಷಡಾಕ್ಷರಪ್ಪ ಸಿ. ಆಗಿರುತ್ತದೆ. ನನ್ನ ತಂದೆಯನ್ನು ಮನೆಯಲ್ಲಿ ವಿಜಯ್ ಕುಮಾರ್ ಎಂದು ಕರೆಯುತ್ತಿದ್ದ ಕಾರಣ ಅದೇ ಹೆಸರನ್ನು ನೀಡಿರುತ್ತಾರೆ. ನಿಮ್ಮ ಶಾಲಾ ದಾಖಲಾತಿಯಲ್ಲಿ ನಿಮ್ಮ ತಂದೆ ಹೆಸರು ವಿಜಯ್ ಕುಮಾರ್ ಎಂದು ಶಾಲಾ ಅಧಿಕಾರಿಗಳ ತಪ್ಪಿನಿಂದ ಆಗಿರುವುದಿಲ್ಲ, ನಿಮ್ಮ ಪೋಷಕರ ತಪ್ಪಿನಿಂದ ಆಗಿರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ನಿಮ್ಮ ತಂದೆ ಹೆಸರು ಷಡಾಕ್ಷರಪ್ಪ ಸಿ. ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿ ನಾನು 9 ತಿಂಗಳ ಮಗುವಿನಿಂದಲೂ ನನ್ನ ಅಜ್ಜಿ ತಾತನ ಮನೆಯಲ್ಲಿ ಬೆಳೆದಿದ್ದು, ನನ್ನ ತಂದೆ ಅವರ ಶಾಲಾ ದಾಖಲಾತಿಯನ್ನು ನನಗೆ ನೀಡಿರುತ್ತಾರೆ ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಪ್ರತಿವಾದಿಗಳ ಯಾವುದೇ ತಪ್ಪು ಇಲ್ಲದೇ ಇದ್ದರೂ ಪ್ರತಿವಾದಿಗಳ ಮೇಲೆ ಸುಳ್ಳು ಆರೋಪ ಮಾಡಿ ಸುಳ್ಳು ದಾವೆ ಹೂಡಿರುತ್ತೀರಾ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ. ಕೇ. ಸ. ಇ. ಎ. ಒ.**

ಸಹಿ/-

1 ನೇ **ಹೆಚ್ಚುವರಿ** ಸಿವಿಲ್ ನ್ಯಾಯಾಧೀಶರು ಮತ್ತು

ಪ್ರ.ದ.ನ್ಯಾ.ದಂ.ರವರು,ತರೀಕೆರೆ.